

**ಕೇವಲ ಎರಡು ವರ್ಷಗಳಷ್ಟೇ ಇತಿಹಾಸವಿರುವ ಟರ್ಕಿ ಆಭರಣ ಇದೀಗ ಒಡವೆ ಪ್ರಪಂಚದಲ್ಲಿ ಸಂಚಲನ ಮೂಡಿಸಿದೆ. ಹಗುರವಾದ ಆದರೆ ಅಷ್ಟೇ ಆಕರ್ಷಕವಾದ, ವಿವಿಧ ವಿನ್ಯಾಸಗಳಲ್ಲಿ ದೊರೆಯುವ ಟರ್ಕಿ ಒಡವೆ ಧರಿಸಿದರೆ ತ್ವಚೆಗೆ ಹಿತವಾಗಿರುತ್ತದೆ.**

ಇರುವುದರಿಂದ ರಕ್ಷಣೆಗಾಗಿ ಕೆಳಗಿನ ಪದರ ಹೆಚ್ಚುವರಿಯಾಗಿ ರಚನೆಯಾಗಿದೆ. ಮೇಲಿನ ಪದರ ಹೊಳಪು ಕೆಳಗಿನ ಪದರ ಹೊಳಪಿಲ್ಲದೆ ಇದ್ದು ಪದಕಗಳು ಮಿರರ್ ಫಿನಿಶ್‌ನಿಂದ ಕೂಡಿದೆ. ಅಂದರೆ ಪದಕಗಳು ವಿನ್ಯಾಸದ ಭಾಗಗಳು ಉಬ್ಬಿದ್ದು ಬಹಳ ಸುಂದರವಾಗಿರುತ್ತದೆ. ಇದು 3ಎ ರೂಪದಲ್ಲಿ ಕಾಣುತ್ತದೆ. ಎಷ್ಟೆಂದರೆ ಪದಕದ ಒಳಗೆ ಹೊರಗಿನಿಂದ ಸೂಸುವ ಬೆಳಕಿನ ಕಿರಣವು ಪ್ರತಿಬಿಂಬಿಸುವಂತೆ ಮಾಡಿ ಹೊಳಪನ್ನು ಹೆಚ್ಚಿಸಿ ಪ್ರಭೆಯಿಂದ ಜನರನ್ನು ಹೆಚ್ಚು ಆಕರ್ಷಿಸುವ ರೂಪ ಪಡೆಯುತ್ತದೆ.

ಇದರ ರಚನೆಯು ರಿಂಗ್‌ಗಳ ಸಹಾಯದಿಂದ ಮಾಡುವುದರಿಂದ ಸುಲಭವಾಗಿ ಮಡಚಬಹುದು. ತೂಕದಲ್ಲಿ 80 ಗ್ರಾಂ ಬರುವ ದೊಡ್ಡ ಹಾರಮ್ ಆಭರಣವು ಟರ್ಕಿ ವಿನ್ಯಾಸದಲ್ಲಿ 50ರಿಂದ 60ಗ್ರಾಂನಲ್ಲಿ ತಯಾರಿಸಬಹುದು. ಅಷ್ಟೊಂದು ಲೈಟ್ ವೈಟ್ ಆಗಿರುತ್ತದೆ.

ಈ ಆಭರಣವು ಹೆಚ್ಚಾಗಿ ವೃತ್ತ, ದೋಣಿ, ಹೂವು... ಹೀಗೆ ವಿಧ ವಿಧ ರೂಪದಲ್ಲಿ ಸಿಗುತ್ತದೆ. ಜೋಡಿಸಿಟ್ಟ ಹೂಗುಚ್ಛ, ಪುಷ್ಪ ಸಂಪುಟ, ರಂಗೋಲಿ, ಪ್ರಕೃತಿಯ ವಿಸ್ಮಯ ಹೀಗೆ ಅತ್ಯದ್ಭುತ ರೀತಿಯಲ್ಲಿ ಚಿತ್ರಿಸಲಾಗುತ್ತದೆ. ಬಾಳಿಕೆಯಲ್ಲಿ ಇತರೆ ಆಭರಣಕ್ಕೇನೂ ಕಡಿಮೆಯಿಲ್ಲ. ಜಾಗರೂಕತೆಯಿಂದ ನೋಡಿಕೊಂಡಲ್ಲಿ ವರ್ಷಾನುಗಟ್ಟಲೆ ಚೆನ್ನಾಗಿರುತ್ತದೆ. ತುಂಡಾಗುವುದಿಲ್ಲ. ಬಳಸಿದ ಗ್ರಾಹಕರು ಮತ್ತೊಮ್ಮೆ ಬಂದು ಹೊಳಪಿನ ಆಭರಣ ಕೊಡಿ ಎಂದು ಕೇಳುವುದರಲ್ಲಿ ಸಂಶಯವಿಲ್ಲ.





### ಟರ್ಕಿ ಆಭರಣಗಳ ವಿಧಗಳು

ಹಾರಮ್, ನೆಕ್ಲೇಸ್ ಪದಕಗಳು ಸದ್ಯ ಚಾಲ್ತಿಯಲ್ಲಿದ್ದು ಟ್ರೆಂಡ್ ಅನ್ನೇ ಸೃಷ್ಟಿಸಿದೆ. ಮಕ್ಕಳಿಂದ ಹಿಡಿದು ವೃದ್ಧೆಯವರೆಗೆ ಎಲ್ಲರೂ ಇದನ್ನು ಧರಿಸಬಹುದು. ಟರ್ಕಿ ಆಭರಣವನ್ನು ಸಂಕಲ್ಪ ಆಭರಣ ಎಂದೂ ಕರೆಯುತ್ತಾರೆ. ಇದು ಎಲ್ಲ ಗೋಲ್ಡ್ ವಿನ್ಯಾಸದಲ್ಲೇ ಇರುತ್ತದೆ. ಬಟ್ಟೆಗೆ ಹೊಂದಿಕೊಂಡು ಇದನ್ನು ಕುತ್ತಿಗೆಯಲ್ಲಿ ನೆಕ್ಲೇಸ್ ಅದರ ಜೊತೆಗೆ ಇನ್ನೊಂದು ಆಭರಣವಾಗಿ ಧರಿಸಬಹುದು. ಯಾವ ಆಭರಣದ ಜೊತೆಯಾದರೂ ಹೊಂದಿಕೊಳ್ಳುತ್ತದೆ. ಕೇವಲ ಗ್ಲಾಸ್ ಫಿನಿಶ್ ಇದರ ಅದ್ಭುತ ನೋಟಕ್ಕೆ ಕಾರಣವಾದ ಕಾರಣ. ರೂಬಿ, ಎಮರಾಲ್ಡ್, ಕ್ರಿಸ್ಟಲ್ ಯಾವುದೇ ಬಣ್ಣದ ಹರಳುಗಳ ಒಂದು ಆಭರಣ, ಜೊತೆಗೆ ಟರ್ಕಿ ಆಭರಣ ಸುಂದರವಾಗಿ ಕಾಣುತ್ತದೆ.

ಆಭರಣವನ್ನು ಬಾಕ್ಸ್‌ನಲ್ಲಿ ಇಟ್ಟು ಜೋಪಾನ ಮಾಡಿಕೊಳ್ಳಿ, ಕುತ್ತಿಗೆಗೆ ಹಾಕುವಾಗ, ತೆಗೆಯುವಾಗ ಕುಳಿತುಕೊಂಡೇ ಹಾಕಿ ತೆಗೆಯಬೇಕು. ಕೂದಲು ಸಿಕ್ಕಿಕೊಂಡಲ್ಲಿ ಎಳೆಯಬೇಡಿ. ಲೆಹಂಗಾ, ಚೂಡಿದಾರ್, ಸೀರೆ ಚೆನ್ನಾಗಿ ಒಪ್ಪುತ್ತದೆ. ಮದುವೆ, ಆರತಕ್ಷತೆಯಲ್ಲಿ ಕುತ್ತಿಗೆಯಲ್ಲಿರುವ ಆಭರಣ ಜನರ ಕಣ್ಮನ ಸೆಳೆಯುತ್ತದೆ. ■